**ಅಸಲು ದಾವಾ ನಂ. 66/2017**

**ಪಿ ಡಬ್ಲ್ಯೂ 1**

***ದಿನಾಂಕ: 05-10-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.***

***ಮುಖ್ಯವಿಚಾರಣೆಃ ವಾದಿ ಪರ ವಕೀಲರಿಂದಃ***

ನಾನು ಈ ಕೇಸಿನಲ್ಲಿ ವಾದಿಗಳ ಪರ ಸಾಕ್ಷಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದೆ.

ವಾದಿಯರು ಬರೆದುಕೊಟ್ಟ ಜಿ ಪಿ ಎ ಹಾಜರುಪಡಿಸಿದ್ದು ಅದನ್ನು ನಿಪಿ-*1* ಎಂದು ಗುರುತಿಸಲಾಯಿತು. ಮೈಸೂರು ಸರ್ಕಾರದ ನಡಾವಳಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-*2* ಮತ್ತು ನಿಪಿ-*3* ಎಂದು ಗುರುತಿಸಲಾಯಿತು. ದಾವಾ ಆಸ್ತಿ ಕನ್ನಯ್ಯ ಬೋವಿ ಇವರಿಗೆ ಮಂಜೂರಾದ ಬಗ್ಗೆ ಗ್ರ್ಯಾಂಟ್ ಸರ್ಟಿಪಿಕೇಟಿನ ದೃಢೀಕೃತ ನಕಲನ್ನುಹಾಜರುಪಡಿಸಿದ್ದು ಅದನ್ನು ನಿಪಿ-*4* ಎಂದು, ಎಂ ಆರ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-*5* ಎಂದು, ದಿಃ *23-03-1991* ರ ನೊಂದಾಯಿತ ವಿಭಾಗ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-*6* ಎಂದು, ದಾವಾ ಆಸ್ತಿಯ ಆರ್ ಟಿ ಸಿ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-*7*, ನಿಪಿ-*8* ಎಂದು, ಪ್ರತಿವಾದಿಗೆ ನಮ್ಮ ವಕೀಲರ ಮುಖಾಂತರ ನೋಟೀಸನ್ನು ಕಳುಹಿಸಿದ್ದು ಸದರಿ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-*9* ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)***

***ಓ ಹೇ ಕೇ ಸ ಇ ಎ ಒ***

Sd/-

***(ಗಂಗಾಧರ ಚನ್ನಬಸಪ್ಪ ಹಡಪದ)***

***ಹಿರಿಯ ಸಿವಿಲ್ ನ್ಯಾಯಾಧೀಶರು,***

***ತರೀಕೆರೆ.***